“ನನ್ನ ಶಾಲೆಯಲ್ಲಿನ ಕ್ರೀಡಾ ಸಂಸ್ಕೃತಿಯೇ ತರಗತಿಯಲ್ಲಿ ಸಮತೆ ಮತ್ತು ಪರಸ್ಪರ ಗೌರವವನ್ನು ಸಾಧ್ಯವಾಗಿಸಿದೆ”

ಧರಮ್‌ವೀರ್ ಸಿಂಗ್ ಚೌಹಾಣ್

ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆ, ವಿಜಯರಾಮ್‌ಪುರ

ಬಾಜ್ಪುರ ಬ್ಲಾಕ್ ಉಧಮ್‌ಸಿಂಗ್ ನಗರ ಜಿಲ್ಲೆ, ಉತ್ತರಾಖಂಡ್

ಧರಮ್‌ವೀರ್ ಸಿಂಗ್ ಚೌಹಾಣ್, ವಿಜಯರಾಮ್‌ಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನವೆಂಬರ್ 2004ರಲ್ಲಿ ವರ್ಗಾವಣೆಯಾದರು. ಆಗ ಶಾಲೆ ಆರಂಭವಾಗಿ ಕೆಲವು ತಿಂಗಳು ಮಾತ್ರ ಕಳೆದಿತ್ತು. ಶಾಲೆಯಲ್ಲಿ ಇದ್ದುದು ಏಳು ಮಕ್ಕಳು ಹಾಗೂ ಮುಖ್ಯ ಶಿಕ್ಷಕ ಕೆ. ಎನ್. ಯಾದವ್. ಇಬ್ಬರೂ ಸೇರಿಕೊಂಡು ಅಕ್ಕಪಕ್ಕದ

ಗ್ರಾಮಸ್ಥರನ್ನು ಒಟ್ಟುಗೂಡಿಸಿ, ವರ್ಷದೊಳಗೆ 34 ಮಕ್ಕಳನ್ನು ದಾಖಲಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಆದರೆ, ಶಾಲೆಯಲ್ಲಿ ಶೌಚಾಲಯ ಇಲ್ಲದಿದ್ದುದು ನಾಚಿಕೆಗೇಡಿನ ಸಂಗತಿಯಾಗಿತ್ತು. ವಿದ್ಯಾರ್ಥಿಗಳಲ್ಲಿ ಪ್ರಾಯಕ್ಕೆ ಬರುತ್ತಿದ್ದ ಹೆಣ್ಣುಮಕ್ಕಳೂ ಇದ್ದರು. ಯಾವುದೇ ಅನುದಾನದ ಸಾಧ್ಯತೆ ಇಲ್ಲವಾದ್ದರಿಂದ, ಧರಮ್‌ವೀರ್ ತಮ್ಮ ಜೇಬಿನಿಂದಲೇ ರೂ.5,500 ವೆಚ್ಚ ಮಾಡಿ, ಹೆಣ್ಣು ಮಕ್ಕಳಿಗಾಗಿ ತಾತ್ಕಾಲಿಕ ಶೌಚಾಲಯ ಕಟ್ಟಿಸಿದರು. ಶಾಲೆಗೆ 2007ರವರೆಗೆ ಯಾವುದೇ ಅನುದಾನ ಬರಲಿಲ್ಲ. ಹೀಗಾಗಿ ಧರಮ್‌ವೀರ್ ಮೂಲಸೌಲಭ್ಯದ ದುರಸ್ತಿ ಹಾಗೂ ನಿರ್ವಹಣೆಗೆ ತಮ್ಮ ಹಣವನ್ನೇ ಖರ್ಚು ಮಾಡಬೇಕಾಯಿತು. ಗ್ರಾಮ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಕೆಟ್ಟದ್ದಾಗಿರಲಿಲ್ಲ. ಗ್ರಾಮಸ್ಥರು ಕೃಷಿ ಕಾರ್ಮಿಕರಾಗಿದ್ದರು. ಸಮುದಾಯದಲ್ಲಿ ಪರಿಶಿಷ್ಟ ಜಾತಿ/ಒಬಿಸಿ ವರ್ಗದವರಿದ್ದು, ಇವರಲ್ಲಿ ಶೇ.20ರಷ್ಟು ಮಂದಿ ಬುಕ್ಸಾ ಬುಡಕಟ್ಟಿನವರು. ಬುಕ್ಸಾ ಬುಡಕಟ್ಟಿನವರು ಈ ಹಿಂದೆ ಜಮೀನು ಹೊಂದಿದ್ದು, ಈಗ ಅದನ್ನೆಲ್ಲ ಅವರು ಕಳೆದುಕೊಂಡು ಬಿಟ್ಟಿದ್ದಾರೆ ಎನ್ನುತ್ತಾರೆ ಧರಮ್‌ವೀರ್. ಮದ್ಯಪಾನದ ಚಟ ಸಮುದಾಯದ ಸಮಸ್ಯೆಗಳನ್ನು ದ್ವಿಗುಣಗೊಳಿಸಿದೆ. ಪೋಷಕರಿಗೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಯಾವುದೇ ಆಸಕ್ತಿ ಇರಲಿಲ್ಲ. ಆದರೆ, ಕಾಲಕಳೆದಂತೆ ಧರಮ್‌ವೀರ್ ಮತ್ತು ಯಾದವ್ ಒಟ್ಟಾಗಿ ಮಕ್ಕಳೊಡನೆ ದೃಢ ಹಾಗೂ ನೇರ ಸಂಬಂಧ ಬೆಳೆಸಿದರು. ಇದು ಸಾಧ್ಯವಾಗಿದ್ದು, ಶಾಲೆಯಲ್ಲಿ ಕ್ರೀಡೆಗೆ ಒತ್ತು ನೀಡುವಂತೆ ಮಾಡಿದ ಧರಮ್‌ವೀರ್ ಅವರ ಚತುರ ನಡೆಯಿಂದ. ಈಗ ಯಾರಾದರೂ ಶಾಲೆಗೆ ಭೇಟಿ ನೀಡಿದರೆ, ಮಕ್ಕಳು ಕ್ರೀಡೆಯಲ್ಲಿ ಶಾಲೆಯ ಸಾಧನೆ ಬಗ್ಗೆ ಮತ್ತು ಶಾಲೆಯ ಬಗೆಗೆ ಹೆಮ್ಮೆಪಟ್ಟುಕೊಳ್ಳುವುದನ್ನು ಕಣ್ಣಾರೆ ನೋಡಬಹುದು.

ಧರಮ್‌ವೀರ್‌ಗೆ ಈಗ 52 ವರ್ಷ. ಅವರು ಶಿಕ್ಷಣ ಇಲಾಖೆಗೆ ಸೇರಿದಾಗ ವಯಸ್ಸು 26. ತಮ್ಮ ಶಿಕ್ಷಕ ವೃತ್ತಿಯ ಮೊದಲ ಎಂಟು ವರ್ಷ ಬಾಜ್ಪುರ ಬ್ಲಾಕ್‌ನ ಪ್ರಾಥಮಿಕ ಶಾಲೆಯೊಂದರಲ್ಲಿ ಕೆಲಸ ಮಾಡಿದ ಬಳಿಕ, 1999ರಲ್ಲಿ ಗದರ್‌ಪುರ್ ಬ್ಲಾಕ್‌ನ ಖೇಮ್‌ಪುರ ಪ್ರಾಥಮಿಕ ಶಾಲೆಗೆ ವರ್ಗಾವಣೆಗೊಂಡರು. "ಖೇಮ್‌ಪುರ ನನ್ನ ಬದುಕಿನಲ್ಲಿ ತಿರುವು ತಂದ ಶಾಲೆ" ಎನ್ನುತ್ತಾರೆ ಧರಮ್‌ವೀರ್. ಅಲ್ಲಿ ಅವರಿಗೆ ಮುಖ್ಯ ಶಿಕ್ಷಕ ರಮೇಶ್ ಸಿಂಗ್ ಅವರ ಜೊತೆಗೂಡಿ ಕೆಲಸ ಮಾಡುವ ಅವಕಾಶ ಸಿಕ್ಕಿತು. "ರಮೇಶ್ ಸಿಂಗ್ ಅವರಿಗೆ ಕ್ರೀಡೆಯಲ್ಲಿ ತೀವ್ರ ಆಸಕ್ತಿ ಇತ್ತು. ಅವರು ಮಕ್ಕಳನ್ನು ನಾನಾ ಕ್ರೀಡಾ ಸ್ಪರ್ಧೆಗಳಿಗೆ ಕರೆದುಕೊಂಡು ಹೋಗುತ್ತಿದ್ದಾಗ ನಾನೂ ಜೊತೆಗೆ ಹೋಗುತ್ತಿದ್ದೆ. ನಾನು ಆಟಗಳತ್ತ ಆಕರ್ಷಿತನಾದೆ; ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ ಆಟಗಳು ಮಹತ್ವದ ಪಾತ್ರವನ್ನು ವಹಿಸಬಲ್ಲವೆಂದು ನನಗೆ ಮನವರಿಕೆಯಾಯಿತು. ರಮೇಶ್ ಸಿಂಗ್ ಅವರ ಜತೆಗಿದ್ದ ಐದು ವರ್ಷಗಳನ್ನು ನಾನು ಎಂದೆಂದಿಗೂ ಮರೆಯಲಾರೆ" ಎಂದವರು ಸ್ಮರಿಸುತ್ತಾರೆ.

ಹೀಗಾಗಿ, ವಿಜಯರಾಮ್‌ಪುರ ಶಾಲೆಗೆ ಬಂದ ಧರಮ್‌ವೀರ್ ಕ್ರೀಡೆಗೆ ಉತ್ತೇಜನ ನೀಡಿದ್ದರಲ್ಲಿ ಯಾವುದೇ ಆಶ್ಚರ್ಯ ಇರಲಿಲ್ಲ. ಮಕ್ಕಳು ಕಬಡ್ಡಿ, ಖೋಖೋ ಹಾಗೂ ಓಟದಲ್ಲಿ ಹೆಚ್ಚು ಪ್ರತಿಭೆ ಹೊಂದಿದ್ದರು. "ಮಕ್ಕಳು ಬಲು ಪ್ರತಿಭಾವಂತರಾಗಿದ್ದರು.

ಅವರಿಗೆ ಪರಿಣತರಿಂದ ತರಬೇತಿ ಅಗತ್ಯವಿತ್ತು. ಬಾಜ್ಪುರ ಸಕ್ಕರೆ ಕಾರ್ಖಾನೆಯಲ್ಲಿ ದೈಹಿಕ ಶಿಕ್ಷಣ ತಜ್ಞರೊಬ್ಬರು ಇದ್ದಾರೆ ಎಂದು ನನಗೆ ಗೊತ್ತಾಯಿತು. ನಾನು ಅವರನ್ನು ಭೇಟಿಯಾಗಿ ನಮ್ಮ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಎಂದು ಮನವೊಲಿಸಿದೆ. ಪ್ರತಿದಿನ ಬೈಕ್‌ನಲ್ಲಿ ಅವರನ್ನು ಶಾಲೆಗೆ ಕರೆತಂದು, ಅವರು ಮಧ್ಯಾಹ್ನ 3ರಿಂದ ಸಂಜೆ 7 ಗಂಟೆ ವರೆಗೆ ತರಬೇತಿ ನೀಡಿದ ಬಳಿಕ ಕರೆದೊಯ್ದು ಮನೆಗೆ ಬಿಟ್ಟು ಆನಂತರ ನನ್ನ ಮನೆಗೆ ಹೋಗುತ್ತಿದ್ದೆ. ಪರಿಣಾಮ ಶೀಘ್ರವೇ ಗೋಚರವಾಗತೊಡಗಿತು. ಮಕ್ಕಳು ಕ್ಲಸ್ಟರ್ ಮಟ್ಟದಲ್ಲಿ ಗೆದ್ದು, ಬ್ಲಾಕ್‌ನ ಹಂತದಲ್ಲಿ ಸ್ಪರ್ಧಿಸುವಂತಾದರು." ಆ ಮೊದಲ ದಿನಗಳಲ್ಲೇ ಒಮ್ಮೆ ಧರಮ್‌ವೀರ್ ಅವರು ಕಾಶಿಪುರದಲ್ಲಿ ನಡೆಯುತ್ತಿದ್ದ ಕ್ರೀಡಾಕೂಟಕ್ಕೆ ಶಾಲೆಯ 27 ಮಕ್ಕಳನ್ನು ಕರೆದೊಯ್ದರು. ಅವರು ತಮ್ಮ ಸ್ವಂತ ಹಣದಿಂದಲೇ ಬಾಡಿಗೆಗೆ ಬಸ್ ವ್ಯವಸ್ಥೆ ಮಾಡಿದರು. ಮಕ್ಕಳು ಅಲ್ಲಿ ಹಲವು ಬಹುಮಾನಗಳನ್ನು ಗೆದ್ದರು. ಊರಿನವರಿಗೆ ವಿಷಯ ತಿಳಿದು, ತಮ್ಮ ಮಕ್ಕಳಿಗೆ ಶಾಲೆಯಲ್ಲಿ ನೀಡುತ್ತಿರುವ ಪ್ರೋತ್ಸಾಹವನ್ನೂ ತರಬೇತಿಯನ್ನೂ ನೋಡಿ ಆಶ್ಚರ್ಯ ಪಟ್ಟರು; ಸಂತಸ ಪಟ್ಟರು. ಶಾಲೆಯ ಶಿಕ್ಷಕರ ಬಗ್ಗೆ ಸಮುದಾಯಕ್ಕೆ ಗೌರವ ಮೂಡಿತು. ಶಾಲೆಗೂ ಸಮುದಾಯಕ್ಕೂ ನಡುವೆ ಸುಮಧುರ ಬಾಂಧವ್ಯದ ಬೆಸುಗೆಯನ್ನು ಧರಮ್‌ವೀರ್ ಸಿಂಗ್ ಹಾಕಿದ್ದರು. ಈಗ ವಿಜಯರಾಮ್‌ಪುರ ಶಾಲೆಯಲ್ಲಿ ಕ್ರೀಡೆ ಸಾಂಸ್ಥಿಕ ಸ್ವರೂಪವನ್ನು ಪಡೆದಿದೆ. ಪ್ರತಿ ಬ್ಯಾಚ್‌ನ ಮಕ್ಕಳು ಕ್ರೀಡೆಯಲ್ಲಿನ ಸಂತೋಷವನ್ನು ಮುಂದಿನ ಬ್ಯಾಚ್‌ಗೆ ದಾಟಿಸುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಶಾಲೆಯಲ್ಲಿನ ಕ್ರೀಡಾ ಸಂಪ್ರದಾಯವು ಗಟ್ಟಿಗೊಳ್ಳುತ್ತಿದೆ. 'ಬಚ್ಚೇ ಅಬ್ ಖುದ್ ಹೀ ಸೀಟೀ ಬಜಾ ಲೇತೇ ಹೆ' (ಈಗ ಮಕ್ಕಳೇ ಖುದ್ದಾಗಿ ಸೀಟಿ ಹೊಡೆಯುತ್ತಾರೆ). ಮಕ್ಕಳು ಆಟದ ನಿಯಮಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆ ಎಂದು ಧರಮ್‌ವೀರ್ ಹೇಳಿದ್ದು ಹೀಗೆ. ಕಳೆದ ಮೂರು ವರ್ಷಗಳಲ್ಲಿ ವಿಜಯರಾಮ್‌ಪುರ ಶಾಲೆ ಬ್ಲಾಕ್‌ನ ಮಟ್ಟದಲ್ಲಿ 200 ಮೀಟರ್ ಹಾಗೂ 400 ಮೀಟರ್ ಓಟ, ಕಬಡ್ಡಿ ಹಾಗೂ ಖೋಖೋದಲ್ಲಿ ಚಾಂಪಿಯನ್ ಆಗಿದೆ. ಆದರೆ, ಈ ವೇಗ ಕಡಿಮೆಯಾಗಬಾರದು ಎಂದು ಧರಮ್‌ವೀರ್‌ಗೆ ಗೊತ್ತಿದೆ. ಅವರು ಈಗ ಶಾಲೆಯ ಕ್ರೀಡಾ ಚಟುವಟಿಕೆಗಳ ಆಡಳಿತದಿಂದ ಹಿಂದೆ ಸರಿದಿದ್ದರೂ, ಮಕ್ಕಳಿಗೆ ಕಠಿಣ ಕ್ರೀಡಾ ವೇಳಾಪಟ್ಟಿಯನ್ನು ನಿಗದಿಗೊಳಿಸಿ, ತರಬೇತಿ ನಿಲ್ಲದೆ ಮುಂದುವರಿಯಬೇಕೆಂದು ಕಟ್ಟುಪಾಡು ಮಾಡಿದ್ದಾರೆ. ಧರಮ್‌ವೀರ್ ಹಾಗೂ ಮಕ್ಕಳು ಈಗಲೂ ಚಳಿಗಾಲದಲ್ಲೂ ಸಂಜೆ 7 ಗಂಟೆವರೆಗೆ ಶಾಲೆಯಲ್ಲಿ ಇರುತ್ತಾರೆ, ಹಲವು ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ ಈ ಪದ್ಧತಿ ಮುಂದುವರಿದೇ ಇದೆ. ಕ್ರೀಡಾ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಮಕ್ಕಳಿಗೆ ಹಾಲು ಹಾಗೂ ಆಹಾರ ಪದಾರ್ಥಗಳನ್ನು ತಮ್ಮದೇ ಹಣದಿಂದ ಧರಮ್‌ವೀರ್ ಪೂರೈಸುತ್ತಾರೆ. ಇವರಿಂದ ಸ್ಫೂರ್ತಿ ಪಡೆದ ಅವರ ಸಹೋದ್ಯೋಗಿಗಳು, ತಾವೂ ಕೈ ಜೋಡಿಸುತ್ತಿದ್ದಾರೆ. ಈಗ ಮಕ್ಕಳನ್ನು ಕ್ರೀಡಾಕೂಟಗಳಿಗೆ ಕರೆದೊಯ್ಯಲು ಬೇರೆ ಶಿಕ್ಷಕರೂ ಮುಂದೆ ಬರುತ್ತಿದ್ದಾರೆ. ಧರಮ್‌ವೀರ್ ಹೇಳುತ್ತಾರೆ, "ನನಗೆ ಸಹಕಾರ ಕೊಟ್ಟರೆ ಅಷ್ಟೇ ಸಾಕು."

ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗಿದೆ. 2005ರಲ್ಲಿದ್ದ

34 ವಿದ್ಯಾರ್ಥಿಗಳ ಸಂಖ್ಯೆ 2008ರಲ್ಲಿ 59, 2016ರಲ್ಲಿ 134 ಆಗಿದೆ. ಇದರ ಹಿಂದೆ ಕಠಿಣ ಶ್ರಮ ಹಾಗೂ ಕೊಂಚ ಜಾಣತನ ಇದೆ. "ಆರಂಭದ ವರ್ಷಗಳಲ್ಲಿ ಇಲ್ಲಿನ ಗ್ರಾಮಗಳಲ್ಲಿ ನಾನು ಸುತ್ತಾಡಿರುವುದರಿಂದ, ನನಗೆ ಇಲ್ಲಿನ ಪರಿಸ್ಥಿತಿ ಗೊತ್ತಿದೆ. ಪ್ರಾಥಮಿಕ ಶಾಲೆಯಿಂದ ಮಕ್ಕಳು 5 ಕಿಲೋಮೀಟರ್ ದೂರದ ಶಿವಪುರಿ ಕಿರಿಯ ಕಾಲೇಜ್ (ಉತ್ತರಾಖಂಡ್‌ದಲ್ಲಿ ಉನ್ನತ ಪ್ರಾಥಮಿಕ ಶಾಲೆಗಳನ್ನು ಜೂನಿಯರ್ ಕಾಲೇಜು ಎಂದು ಕರೆಯುತ್ತಾರೆ)ಗೆ ಹೋಗುತ್ತಾರೆ. ಅಷ್ಟು ದೂರ ಹೋಗುವ ಬದಲು ಹತ್ತಿರವಿರುವ, ಹೆಚ್ಚು ಅನುಕೂಲಕರವಾದ ಹಾಗೂ ಉತ್ತಮ ಕ್ರೀಡಾ ಸೌಲಭ್ಯವಿರುವ ವಿಜಯರಾಮ್‌ಪುರ ಶಾಲೆಗೆ ಸೇರಿಸಿ ಎಂದು ನಾನು ಪೋಷಕರನ್ನು ಪುಸಲಾಯಿಸಿ, ಒಪ್ಪಿಸಿದೆ. ನನ್ನ ಜೊತೆಗೆ ಇತರ ಶಿಕ್ಷಕರೂ ಬಂದರು. ಮಕ್ಕಳಿಗೆ ನಾವು ನಮ್ಮ ಕೈಯಲ್ಲಿ ಸಾಧ್ಯವಿರುವಷ್ಟು ಸೌಲಭ್ಯಗಳನ್ನು ಒದಗಿಸಬೇಕು ಎನ್ನುವುದು ನನ್ನ ನಂಬಿಕೆ" ಎನ್ನುತ್ತಾರೆ ಅವರು.

ಆರಂಭದಿಂದಲೂ ಗಣಿತಶಾಸ್ತ್ರ ಕಲಿಸುತ್ತಿದ್ದ ಧರಮ್‌ವೀರ್, 2015ರಿಂದ ವಿಜ್ಞಾನವನ್ನೂ ಕಲಿಸಲು ಆರಂಭಿಸಿದರು. ಸೇವೆಗೆ ಸೇರುವ ಮುನ್ನ ವಿಜ್ಞಾನ ಇಂಟರ್‌ಮೀಡಿಯೇಟ್ ಹಾಗೂ ಬಿಟಿಸಿ ಮಾಡಿದ ಅವರು, ಅನಂತರ ಕೆಲಸ ಮಾಡುತ್ತಲೇ ಬಿಎ ಮತ್ತು ಎಂಎ (ಸಮಾಜಶಾಸ್ತ್ರ) ಮುಗಿಸಿದರು. ಕಲಿಕೆಯಲ್ಲಿ ತೀವ್ರ ಆಸಕ್ತಿಯಿದ್ದ ಅವರು 2005–06ರಲ್ಲಿ ಎಲ್‌ಜಿಪಿ ಆರಂಭವಾದಾಗ ಅದರೊಡನೆ ಸಂಪರ್ಕ ಬೆಳೆಸಿದರು. ಕಂಠಪಾಠದ ಬದಲು ಪರಿಕಲ್ಪನೆಗಳ ಅರ್ಥಮಾಡಿಕೊಳ್ಳುವಿಕೆ ಆಧರಿತ ಕಲಿಕೆಯ ಪ್ರಯೋಜನಗಳನ್ನು ತಿಳಿದುಕೊಂಡರು. ಎಲ್‌ಜಿಪಿ ಕಾರ್ಯಕ್ರಮವು ಪ್ರಾಥಮಿಕ ಶಾಲೆ ಹಂತದಲ್ಲಿನ ಪರಿಕಲ್ಪನಾತ್ಮಕ ಗ್ರಹಿಕೆಯನ್ನು ಅಳೆಯುವ ಪ್ರಶ್ನೆಗಳ ಪ್ರಯೋಜನಗಳನ್ನು ಅವರಿಗೆ ಪರಿಚಯಿಸಿತು. ಧರಮ್‌ವೀರ್ ಈ ಉಪಕ್ರಮವನ್ನು ಹಿರಿಯ ಪ್ರಾಥಮಿಕ ಶಾಲಾ ಪಠ್ಯಕ್ರಮಕ್ಕೆ ವಿಸ್ತರಿಸಿದರು. ಗಣಿತಶಾಸ್ತ್ರದ ತರಗತಿಗಳಿಗೆ ಇಂಥ ಪ್ರಶ್ನೆಗಳನ್ನು ಸಿದ್ಧಗೊಳಿಸಿದರು. ಶಾಲಾವಧಿಯನ್ನೂ ಮೀರಿ ಕೆಲಸಮಾಡಬಲ್ಲ ಅವರ ಉತ್ಸಾಹವನ್ನೂ ಬದ್ಧತೆಯನ್ನೂ ನೋಡಿದವರಿಗೆ ಅವರು ಬ್ಲಾಕ್ ಹಂತದಲ್ಲಿ ನಿಯಮಿತವಾಗಿ ನಡೆಯುವ ವಿಟಿಎಫ್‌ನಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡಿದ್ದು ಆಶ್ಚರ್ಯ ಉಂಟುಮಾಡಲಿಲ್ಲ. ಅಷ್ಟು ಮಾತ್ರವಲ್ಲದೆ, ಜಿಲ್ಲೆಯಲ್ಲಿ ಆಯೋಜಿಸಿದ್ದ ಇತರೇ ಹಲವು ಶಿಕ್ಷಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲೂ ಅವರು ಭಾಗವಹಿಸಿದ್ದಾರೆ. ದಿನೇಶ್‌ಪುರದಲ್ಲಿ ನಡೆದ ಗಣಿತ ಕಾರ್ಯಾಗಾರವನ್ನು ಅವರು ತುಂಬಾ ಮೆಚ್ಚಿಕೊಂಡರು. "ಪರಿಕಲ್ಪನೆಗಳನ್ನು ಇನ್ನಷ್ಟು ಚೆನ್ನಾಗಿ ವಿವರಿಸಲು ಅಗತ್ಯವಾದ ಬೋಧನೆ–ಕಲಿಕೆಯ ಸಾಧನಗಳನ್ನು ಸೃಷ್ಟಿಸಲು ಅಗತ್ಯವುಳ್ಳ ಪ್ರಾಯೋಗಿಕ ತಿಳಿವಳಿಕೆಯನ್ನು ಈ ತರಬೇತಿ ಕೊಟ್ಟಿತು" ಎನ್ನುತ್ತಾರೆ ಅವರು. ಅದೇ ರೀತಿ ವಿಜ್ಞಾನದ ಚಳಿಗಾಲದ ಸನಿವಾಸ ಕಾರ್ಯಾಗಾರ ಉಪಯುಕ್ತವಾಗಿತ್ತು ಎಂದೂ ಹೇಳುತ್ತಾರೆ.

"ಪಟೋಟಿ ಹಿರಿಯ ಪ್ರಾಥಮಿಕ ಶಾಲೆಯ ಅಶೋಕ್‌ಕುಮಾರ್, ಅದ್ಭುತ ಗಣಿತ ಶಿಕ್ಷಕರೂ ಅತ್ಯುತ್ತಮ ತರಬೇತಿದಾರರೂ ಆಗಿದ್ದು ಅವರು ಈಗ ನಮ್ಮ ಜತೆ ಇದ್ದಾರೆ," ಸಮರ್ಥರನ್ನು ಹುಡುಕಿ ಅವರನ್ನು ಅನೌಪಚಾರಿಕವಾಗಿ ತಮ್ಮ ಶಾಲೆಯಲ್ಲಿ ಒಳಗೊಳ್ಳುವ ಧರಮ್‌ವೀರ್ ಅವರ ವಿಶೇಷ ಗುಣಕ್ಕೆ ಇದೊಂದು ಉದಾಹರಣೆ.

ತರಗತಿಯ ಪ್ರತಿ ಮಗುವನ್ನೂ ಕಲಿಕೆಯತ್ತ ಸೆಳೆಯುವುದು ಅವರು ಎದುರಿಸುವ ಸವಾಲು. ಪ್ರತಿಯೊಬ್ಬ ವಿದ್ಯಾರ್ಥಿಗೂ ಕರಿಹಲಗೆ ಬಳಿ ಬಂದು ಅಭ್ಯಾಸ ಮಾಡಲು ಹೇಳುತ್ತಾರಲ್ಲದೆ, ಪ್ರತಿಯೊಂದು ಮಗುವನ್ನೂ ಒಳಗೊಳ್ಳುವಂತೆ ಪ್ರಜ್ಞಾಪೂರ್ವಕವಾಗಿ ತಮ್ಮ ಗಣಿತ ಪಾಠವನ್ನು ಸಿದ್ಧಗೊಳಿಸುತ್ತಾರೆ. "ಕ್ರೀಡಾ ಸಂಸ್ಕೃತಿಯಿಂದಾಗಿ, ತರಗತಿಯಲ್ಲಿ ಸಮಾನತೆಯ ಭಾವವೂ ಪರಸ್ಪರ ಗೌರವವೂ ಹೆಚ್ಚು ಸ್ವಾಭಾವಿಕವಾಗಿ ಕಾಣಿಸಿಕೊಂಡಿದೆ. ಹೀಗಾಗಿ, ನಲ್ವತ್ತೇಳು ವಿದ್ಯಾರ್ಥಿಗಳಲ್ಲಿ ಕೇವಲ ಹತ್ತು ಮಂದಿ ವಿದ್ಯಾರ್ಥಿಗಳು ವಿಷಯದಲ್ಲಿ ಉತ್ತಮವಾಗಿದ್ದರೂ, ಅವರು ಉಳಿದವರನ್ನು ಹಿಂದೆ ಬಿಟ್ಟು ನಡೆಯುವುದಿಲ್ಲ. ಹೆಚ್ಚಿನವರು ಆಟದಲ್ಲಿ ಅತ್ಯುತ್ತಮರು. ಆದ್ದರಿಂದ, ಕಲಿಕೆಯಲ್ಲಿ ಮುಂದಿರುವ ಹತ್ತು ಉತ್ತಮ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ಅವರಿಂದ ಉಳಿದವರ ಮಟ್ಟವನ್ನು ಹೆಚ್ಚಿಸಲು ಪಾಠ ಮಾಡಿಸುವುದು ನನಗೆ ಕಷ್ಟವಾಗುವುದಿಲ್ಲ". ಧರಮ್‌ವೀರ್‌ಗೆ ವಿದ್ಯಾರ್ಥಿಗಳಲ್ಲಿನ ಶ್ರೇಷ್ಠತೆಯನ್ನು ಕಾಣುವ ಕಣ್ಣು ಇರುವುದರಿಂದ, ಅಂಥವರನ್ನು ಆಯ್ಕೆ ಮಾಡಿ, ತರಬೇತಿ ನೀಡಿ ಜಿಲ್ಲಾ ಮಟ್ಟದ "ಮ್ಯಾಥ್ಸ್ ವಿಜಾರ್ಡ್" ಕಾರ್ಯಕ್ರಮಕ್ಕೆ ಸಿದ್ಧಗೊಳಿಸುತ್ತಾರೆ. "ಹಲವು ವರ್ಷಗಳ ಹಿಂದೆ ಪ್ರತಿಭಾವಂತ–ಬುದ್ಧಿವಂತ ಮಗುವೊಂದನ್ನು ನವೋದಯ ಶಾಲೆಗೆ ಸೇರಿಸಲು ಸಹಾಯ ಮಾಡಿದ್ದೆ. ಅಂದಿನಿಂದ, ಪ್ರತಿಭಾಶಾಲಿ ಮಕ್ಕಳು ಸ್ಪರ್ಧಿಸಿ ಉತ್ತಮ ಸಾಧನೆಗೆ ಮಾಡಲು ಪ್ರಯತ್ನಿಸುತ್ತಿದ್ದೇನೆ" ಎಂದು ಧರಮ್‌ವೀರ್ ಹೇಳುತ್ತಾರೆ.

ತೆರೆದ ಬಯಲಿನಲ್ಲಿ ಚಳಿಗಾಲದ ಹಿತವಾದ ಬಿಸಿಲಲ್ಲಿ ಕುಳಿತು, ಧರಮ್‌ವೀರ್ ತಮ್ಮ ಕುಟುಂಬದ ಬಗ್ಗೆ ಮಾಹಿತಿ ನೀಡಿದರು. ಅವರ ಹಿರಿಯ ಮಗ, ಬಿಟೆಕ್ ಪದವೀಧರ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾನೆ. ಕಿರಿಯ ಮಗ ಎಂಎಸ್ಸಿ ಮುಗಿಸಿ, ಪಿಎಚ್‌ಡಿಗಾಗಿ ರೂರ್ಕಿಯ ಐಐಟಿಯಲ್ಲಿ ಸಂದರ್ಶನ ನೀಡಿದ್ದಾನೆ. ಇವರ ಇಬ್ಬರು ಮಕ್ಕಳು ಎರಡರಿಂದ ಎಂಟನೇ ತರಗತಿ ತನಕ ಇವರದೇ ಶಾಲೆಯಲ್ಲಿ ಓದಿದರು. ಅವರಿಬ್ಬರೂ ಖಾಸಗಿ ಶಾಲೆಯಲ್ಲಿ ಎರಡನೇ ತರಗತಿಯಲ್ಲಿದ್ದಾಗ ಗುರುಸಮಾನರಾದ ರಮೇಶ್ ಸಿಂಗ್ ಅವರ ಪ್ರಭಾವದಿಂದಾಗಿ ಆ ಮಕ್ಕಳನ್ನು ಅಲ್ಲಿಂದ ಬಿಡಿಸಿ ತಮ್ಮದೇ ಸರ್ಕಾರಿ ಶಾಲೆಗೆ ಸೇರಿಸಿದ್ದರು. ಎಂಟನೇ ತರಗತಿ ಬಳಿಕ ಬಾಜ್ಪುರದ ವಿದ್ಯಾಮಂದಿರ ಖಾಸಗಿ ಶಾಲೆಯಲ್ಲಿ ಓದು ಮುಂದುವರಿಸಿದರು.

ಧರಮ್‌ವೀರ್ 2017ರಲ್ಲಿ ಕ್ರೀಡೆಯಲ್ಲಿ ಶಾಲೆಯ ನಿರಂತರ ಉತ್ತಮ ಸಾಧನೆಗೆ ಬ್ಲಾಕ್ ಮಟ್ಟದ 'ಅತ್ಯುತ್ತಮ ಶಿಕ್ಷಕ ಪುರಸ್ಕಾರ' ಪಡೆದರು. ಈ ವಿಷಯ ಹೇಳುತ್ತಿದ್ದಂತೆಯೇ ತಮ್ಮ ಈ ಪಯಣದಲ್ಲಿ ಜೊತೆಯಾದವರನ್ನು ಸ್ಮರಿಸಿಕೊಳ್ಳುವುದನ್ನು ಅವರು ಮರೆಯಲಿಲ್ಲ. ಬಾಜ್ಪುರ ಬ್ಲಾಕ್‌ನ ಉಪ ಬಿಇಒ ಶ್ರೀಮತಿ ಪ್ರೇಮಾ ಬಿಷ್ಟ್ ಅವರು ತಮ್ಮೆಲ್ಲ ಪ್ರಯತ್ನಗಳಿಗೆ ನೀಡಿದ ಬೆಂಬಲವನ್ನು ಅವರು ವಿಶೇಷವಾಗಿ ಉಲ್ಲೇಖಿಸಿದರು. "ಹೆಚ್ಚುವರಿ ಕೆಲಸ ಎನ್ನುವುದು ಇಲ್ಲ. ನಾನು ನನ್ನ ಕೆಲಸಕ್ಕೂ ನನಗೆ ಹೊರಿಸಿದ ಜವಾಬ್ದಾರಿಗೂ ನ್ಯಾಯ ಸಲ್ಲಿಸಬೇಕು. ಇದಕ್ಕಾಗಿ ನನ್ನ ರಜೆಯನ್ನೋ ಸಾಯಂಕಾಲಗಳನ್ನೋ ಬಳಸಿದ್ದೇನೆ ಅಷ್ಟೆ, ಅದೇನೂ ದೊಡ್ಡದಲ್ಲ."